ಹೊಳೆನರಸೀಪುರದಿಂದ ಹಾಸನ ಹಾಸನದಿಂದ ಬೇಲೂರಿನವರೆಗೆ ಸಾಲು ಮರಗಳ ಹರಾಜು

1801 (1360) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಹೊಳೇನರಸೀಪುರದಿಂದ ಹಾಸನ, ಹಾಸನದಿಂದ ಬೇಲೂರಿನವರೆಗೆ ರಸ್ತೆಗಳಲ್ಲಿನ ಸಾಲು ಮರಗಳನ್ನು ರಸ್ತೆ ಅಗಲಗೊಳಿಸುವುದಕ್ಕೋಸ್ಕರ ಹರಾಜು ಹಾಕಿದ್ದು ಅದರಿಂದ ಬಂದ ಆದಾಯ ಎಷ್ಟು? ಹರಾಜಾಗಿದ್ದು ಯಾವ ಯಾವ ಜಾತಿ ಮರಗಳು? (ವಿವರ ನೀಡುವುದು)

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ: 57ರ 40ನೇ ಕಿ.ಮೀ ನಿಂದ 84ನೇ ಕಿ.ಮಿ. ವರೆಗೆ ಅಭಿವೃದ್ಧಿಪಡಿಸಲು ಹೊಳೇನರಸೀಪುರದಿಂದ ಹಾಸವದವರೆಗೆ ಒಟ್ಟು 207 ರಸ್ತೆ ಬದಿ ಮರಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇ ಮಾಡಿದ್ದು, ಹರಾಜಿನಿಂದ ಸರ್ಕಾರಕ್ಕೆ ರೂ. 2,75,640-00 ಆದಾಯ ಬಂದಿರುತ್ತದೆ.

ಮತ್ತು ಹಾಸನದಿಂದ ಬೇಲೂರಿನವರೆಗೆ 833 ರಸ್ತೆ ಬದಿ ಮರಗಳನ್ನು ಹರಾಜು ಮಾಡಿದ್ದು ಇದರಿಂದ ಸರ್ಕಾರಕ್ಕೆ ರೂ. 6,34,270-00 ಆದಾಯ ಬಂದಿರುತ್ತದೆ. ಮೇಲ್ಕಂಡಂತೆ ಹರಾಜಾದ ಎಲ್ಲಾ ರಸ್ತೆ ಬದಿ ಮರಗಳು ಕಾಡುಜಾತಿಯ ಮರಗಳಾಗಿದ್ದು ವಿವರವನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಅನುಬಂಧ

ಹೊಳೆನರಸೀಪುರ-ಹಾಸನ ರಸ್ತೆ ಬದಿ ಮರಗಳ ವರ್ಗವಾರು ಪಟ್ಟಿ

1.	ಆಲ	61
2.	ಅತ್ತಿ	08
3.	ಗೋಣಿ	16
4.	ನೇರಳೆ	10
5.	ಬೇವು	07
6.	ಹುಣಸೆ	06
7.	ಬಸರಿ	26
8.	ಅರಳಿ	05
9.	ರೈನ್‌ಟ್ರಿ	38
10.	ಗೋಲ್‌ಮೋಹರ್	12
11.	ಸಿಸು	09
12.	ಪೆಲ್ಟೋಫಾರಂ	01
13.	ಸೈತೋಡಿಯಾ	04
14.	ಬುಗರಿ	02
15.	ಹೊಂಗೆ	01
16.	ಮಾವು	01
	ಒಟ್ಟು	207

ಅನುಬಂಧ

ಹಾಸನ-ಬೇಲೂರು ರಸ್ತೆ ಬದಿ ಮರಗಳ ವರ್ಗವಾರು ಪಟ್ಟಿ

1.	ಆಲ	238
2.	ನೇರಳೆ	96
3.	ಗೋಣಿ	167
4.	ಬಸರಿ	05
5.	ಮಾವು	206
6.	ಅತ್ತಿ	94
7.	ಕರಿಜಾಲಿ	07
8.	ಹಲಸು	03
9.	ಹುಣಸೆ	04
10.	ಸೀಮೆತಂಗಡಿ	01
11.	ಅರಳಿ	09
12.	ಬಾಗ	01
13.	ಗೋಲ್‌ಮೋಹರ್	01
14.	ರೈನ್‌ಟ್ರಿ	01
	ಒಟ್ಟು	833

ಜಮೀನು ನಕ್ಷೆಗೆ ಲೈಸೆನ್ಸ್ ಸರ್ವೆಯರ್ ಸಹಿ ಪದ್ಧತಿ

1802 (1361) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮೀನು ನಕ್ಷೆಗೆ ಲೈಸೆನ್ಸ್ ಸರ್ವೆಯರ್ ಸಹಿ ಕಡ್ಡಾಯ ಪದ್ಧತಿಯನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾರಣಕ್ಕೆ ರದ್ದುಗೊಳಿಸಲಾಗಿದೆ ತಿಳಿಸುವುದು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಲೈಸೆನ್ಸ್ ಸರ್ವೆಯರ್ ಯೋಜನೆಯ ಪದ್ಧತಿಯನ್ನು ಸರ್ಕಾರ ರದ್ದುಗೊಳಿಸಿರುವುದಿಲ್ಲ. ಯೋಜನೆಯು ಅಗತ್ಯ ಕಾನೂನು ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವಾಗ ಸಾರ್ವಜನಿಕರ ರಿಟ್ ಅರ್ಜಿ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ಸರ್ಕಾರದ ಅಧಿಸೂಚನೆ ಸಂ. ಆರ್‌ಡಿ 185 ಮುನೋಮು 2001, ದಿನಾಂಕ 20.8.2002ಕ್ಕೆ ಮಾತ್ರ ತಡೆಯಾಜ್ಞೆ ನೀಡಿರುತ್ತದೆ. ಉಚ್ಚ ನ್ಯಾಯಾಲಯದಲ್ಲಿನ ಈ ಪ್ರಕರಣ ಇತ್ಯರ್ಥವಾದ ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಹಾಸನ ಜಿಲ್ಲೆಯ ಬಾಲ ಕಾರ್ಮಿಕರು

1803 (1362) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಬಾಲ ಕಾರ್ಮಿಕರು ಎಷ್ಟು; ತಾಲ್ಲೂಕುವಾರು ವಿವರ ನೀಡುವುದು.